ವಿದ್ಯಾರ್ಥಿಯು ಜ್ಞಾನದ ಕಾಲುಭಾಗವನ್ನು ಉಪಾಧ್ಯಾಯರಿಂದಲೂ
ಇನ್ನೊಂದು ಕಾಲುಭಾಗವನ್ನು ತನ್ನ ಬುದ್ಧಿಶಕ್ತಿಯಿಂದಲೂ
ಮೂರನೆಯ ಕಾಲುಭಾಗವನ್ನು ಇತರ ವಿದ್ಯಾರ್ಥಿಗಳಿಂದಲೂ
ಕೊನೆಯ ಕಾಲು ಭಾಗವನ್ನು ತನ್ನ ಜೀವನಾನುಭವದಿಂದಲೂ ಪಡೆಯುತ್ತಾನೆ.

—ಮಹಾಭಾರತ

ಅಳವಡಿಸಿಕೊಂಡು ಅವನ್ನು ಕಾರ್ಯಗತಗೊಳಿಸಬೇಕು. ಅವನೇ ನಿಜವಾದ ಆದರ್ಶ ವಿದ್ಯಾರ್ಥಿ. ಈತ ಸತ್‌ಚಾರಿತ್ರ್ಯವನ್ನು ಹೊಂದಿರಬೇಕು. ಕೇವಲ ಶಾಲಾ-ಕಾಲೇಜುಗಳಲ್ಲಿ ಪದಕ, ಡಿಗ್ರಿ, ಪಡೆದರೆ ಸಾಲದು. ಪ್ರೇಮ ಮತ್ತು ಪ್ರಜ್ಞೆ ಆದರ್ಶ ವಿದ್ಯಾರ್ಥಿಯಲ್ಲಿರಬೇಕು.


—ರಾಜೇಶ್,ಬಿ.ಪಿ. ಪ್ರಥಮ ಎಲ್.ಎಲ್.ಬಿ.
ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು

ಆದರ್ಶ ವ್ಯಕ್ತಿತ್ವ ಬೆಳೆಸಿಕೊಳ್ಳಬಯಸುವ, ಪೂರಕವಾದ ಅಂಶಗಳನ್ನು ನಿತ್ಯದಲ್ಲಿ ಅಳವಡಿಸಿಕೊಳ್ಳುವ, ಸಜ್ಜನ ಸಹವಾಸದಲ್ಲಿ ತೊಡಗುವ, ತನ್ನಲ್ಲಿ ತನಗೆ ಹಿಡಿತವಿರುವ, ಕೆಟ್ಟದನ್ನು ಖಂಡಿಸುವ ಧೈರ್ಯ ಹಾಗೂ ಮನಸ್ಸುಳ್ಳ ಜೊತೆಗೆ ಒಳ್ಳೆಯದನ್ನು ಗೌರವಿಸುವ ವಿದ್ಯಾರ್ಥಿ ಆದರ್ಶ ವಿದ್ಯಾರ್ಥಿಯಾಗಬಲ್ಲ. ಪರಿಸ್ಥಿತಿ ಅಥವಾ ವಾತಾವರಣ ಹೇಗೆ ಬದಲಾದರೂ ತನ್ನ ಸ್ವಂತಿಕೆಯನ್ನೂ ಆದರ್ಶವನ್ನೂ ಕಾಪಾಡಿಕೊಳ್ಳಬಲ್ಲ ಸಾಮರ್ಥ್ಯ ಆದರ್ಶ ವಿದ್ಯಾರ್ಥಿಯ ಅವಿಭಾಜ್ಯ ಅಂಶವಾಗಿರುತ್ತದೆ. —ಸಿರಿದೇವಿ ಹೆಚ್. ಎಸ್., ಅಂತಿಮ ಬಿ.ಎಸ್ಸಿ., ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

# ಪ್ರಹಸನ ಪ್ರಸಂಗ

ರೋಗಿಯೊಬ್ಬನಿಗೆ ಆಪರೇಶನ್ ಆಗಬೇಕಾಗಿದೆ. ಸರ್ಜನ್ ಅವನಿಗೆ ಧೈರ್ಯ ಹೇಳುತ್ತಿದ್ದಾನೆ : "ನೀವು ಏನೂ ಭಯಪಡಬೇಡಿ. ನಾನು ಎಷ್ಟೊ ಆಪರೇಶನ್ ಮಾಡಿದ್ದೇನೆ. ನನಗೆ ಇದೇನೂ ದೊಡ್ಡದಲ್ಲ. ನನಗೆ ಅನೇಕ ದಶಕಗಳ ಅನುಭವವಿದೆ. ಈ ಹುಲುಸಾಗಿ ಬೆಳೆದಿರುವ ನನ್ನ ಗಡ್ಡವೇ ಇದಕ್ಕೆ ಸಾಕ್ಷಿ." ರೋಗಿಗೆ ಭರವಸೆ ಉಂಟಾಯಿತು. ಅವನು ಆಪರೇಶನ್ ಹಾಸಿಗೆಯ ಮೇಲೆ ನಿಶ್ಚಿಂತೆಯಿಂದ ಮಲಗಿದ. ಅರಿವಳಿಕೆ ಕೊಟ್ಟದ್ದೂ ಆಯಿತು, ಅನಂತರ ಆಪರೇಶನ್ನೂ ಆಯಿತು.

ರೋಗಿ ಬಹಳ ಕಾಲದ ನಂತರ ನಿಧಾನವಾಗಿ ಕಣ್ಣು ತೆರೆದ. ಅವನ ಮುಂದೆ ಗಡ್ಡಧಾರಿಯಾದ ವ್ಯಕ್ತಿಯೊಬ್ಬನು ನಿಂತಿದ್ದನು.



ರೋಗಿ ಸಂತೋಷದಿಂದ ಕೈಮುಗಿದು : "ಸರ್, ತುಂಬ ಥ್ಯಾಂಕ್ಸ್. ನೀವು ಯಶಸ್ವಿಯಾಗಿ ಆಪರೇಶನ್ ಮಾಡುತ್ತೀರಿ ಎಂದು ನನಗೆ ಗೊತ್ತಿತ್ತು, ಡಾಕ್ಟರ್." ಆ ವ್ಯಕ್ತಿ ಹೇಳಿದ : "ನಾನು ನಿನ್ನ ಡಾಕ್ಟರ್ ಅಲ್ಲ. ನಾನು ಸಂತ ಪೀಟರ್."

ನಮ್ಮ ಆತ್ಮವಿಸ್ಮೃತಿಯಿಂದಾಗಿ ನಾವು ಎಲ್ಲಿದ್ದೇವೆಂಬುದೇ ನಮಗೆ ತಿಳಿದಿರುವುದಿಲ್ಲ. ನಾವು ದೇವರನ್ನು ಕುರಿತು ಧ್ಯಾನ ಮಾಡುತ್ತಿರುತ್ತೇವೆ. ಆದರೆ ಆಲೋಚನೆಗಳು ನಮ್ಮನ್ನು ಬೇರೆಲ್ಲೋ ಕರೆದುಕೊಂಡು ಹೋಗಿರುತ್ತವೆ. ಅನಂತರ ನಾವು ಎಚ್ಚೆತ್ತಾಗ ನಾವು ಎಲ್ಲಿದ್ದೇವೆಂಬುದೇ ನಮಗೆ ತಿಳಿದಿರುವುದಿಲ್ಲ. *

ಜಾಣತನಕ್ಕಿಂತ ವಿವೇಕಕ್ಕೆ ನಾವು ಹೆಚ್ಚು ಒತ್ತು ಕೊಡಬೇಕು. ಕೇವಲ ಜಾಣತನ ಅನೇಕ ವೇಳೆ ನಮಗೇ ತಿರುಗುಬಾಣವಾಗಿ ಬಿಡುತ್ತದೆ.

ಒಬ್ಬ ರೈತನು ಕಲ್ಲಂಗಡಿಯನ್ನು ಬೆಳೆಸಿ, ಅದರ ಮಾರಾಟದಿಂದ ಜೀವನ ನಡೆಸುತ್ತಿದ್ದನು. ಒಂದು ದಿನ ಅವನಿಗೆ ತಿಳಿಯಿತು, ಕಳ್ಳರು ಕಲ್ಲಂಗಡಿಯನ್ನು ಕದ್ದುಕೊಂಡು ಹೋಗುತ್ತಿದ್ದಾರೆ ಎಂದು. ಮೊದಮೊದಲು ಅವನು ಅದಕ್ಕೆ ಹೆಚ್ಚು ಗಮನ ಕೊಡಲಿಲ್ಲ. ಆದರೆ ದಿನ ದಿನ ಕದಿಯುವುದು ಜಾಸ್ತಿಯಾಯಿತು. ತನಗೆ ಮಾರಾಟಕ್ಕೆ ಹೆಚ್ಚು ಹಣ್ಣುಗಳೇ ಉಳಿಯುತ್ತಿರಲಿಲ್ಲ. ಅವನಿಗೆ ಒಂದು ಉಪಾಯ ಹೊಳೆಯಿತು. ಒಂದು ತಲೆಬುರುಡೆ ಮತ್ತು ಎರಡು ಎಲುಬುಗಳನ್ನು ಗೂಟಕ್ಕೆ ಸಿಕ್ಕಿಸಿ, "ಇವುಗಳಲ್ಲಿ ಒಂದು ಕಲ್ಲಂಗಡಿ ವಿಷಪೂರಿತವಾಗಿದೆ" ಎಂದು ಎಚ್ಚರಿಕೆಯನ್ನು ಬರೆದನು. ಕಲ್ಲಂಗಡಿ ಕದಿಯುವುದು ನಿಂತಿತು. ಆದರೆ ಕೆಲವು ದಿನಗಳ ನಂತರ ಒಂದು ವಿಶೇಷ ಸಂಭವಿಸಿತು. ರೈತನು ನೀಡಿದ ಎಚ್ಚರಿಕೆಯ ಬದಲಾಗಿತ್ತು: "ಇವುಗಳಲ್ಲಿ ಎರಡು ಕಲ್ಲಂಗಡಿ ಹಣ್ಣುಗಳು ವಿಷಪೂರಿತವಾಗಿವೆ."

